

ಯಾವಾಗಲೂ ಪ್ರಾರ್ಥನೆ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿರುವವನು ಎಲ್ಲ ಕಷ್ಟಗಳನ್ನೂ ಸುಲಭವಾಗಿ ದಾಟುತ್ತಾನೆ; ಎಲ್ಲ ಸಂಕಟಗಳ ಮಧ್ಯದಲ್ಲೂ ಶಾಂತಿ ಸಮಾಧಾನಗಳಿಂದ ಇರುತ್ತಾನೆ.

ನಾವು ಕಷ್ಟಪಡುವುದು ನಮ್ಮ ಕರ್ಮದ ಪರಿಣಾಮದಿಂದಾಗಿಯೇ. ಅದಕ್ಕಾಗಿ ಯಾರನ್ನೂ ದೂರುವುದು ಸರಿಯಲ್ಲ. ಶ್ರದ್ಧಾಭಕ್ತಿಗಳಿಂದ ನಾವು ಸಂಪೂರ್ಣವಾಗಿ ಭಗವಂತನಲ್ಲಿ ಶರಣಾಗಿ ನಮ್ಮಿಂದ ಸಾಧ್ಯವಾದಷ್ಟು ಬೇರೆಯವರ ಸೇವೆ ಮಾಡಬೇಕು. ನಮ್ಮಿಂದ ಯಾರಿಗೂ ದುಃಖವಾಗಬಾರದು.

ತೃಪ್ತಿಗೆ ಸಮನಾದ ಸಂಪತ್ತಿಲ್ಲ; ಸಹನೆಗೆ ಸಮನಾದ ಸದ್ಗುಣವಿಲ್ಲ.

ಸುಖವಾಗಲಿ, ದುಃಖವಾಗಲಿ, ನಮ್ಮನ್ನು ಬಿಟ್ಟು ಅವು ಎಲ್ಲಿಗೆ ತಾನೆ ಹೋಗುತ್ತವೆ? ಅವು ನಮ್ಮ ಜೊತೆಗಾರರಿದ್ದಂತೆ. ಅದಕ್ಕೇಕೆ ತಲೆ ಕೆಡಿಸಿಕೊಳ್ಳಬೇಕು?

ಕಷ್ಟಗಳು ಬಂದಾಗಲೂ ಕೂಡ ಯಾರು ಭಗವಂತನಿಗೆ ಅಂಟಿಕೊಂಡಿರುತ್ತಾನೆಯೋ ಅವನು ಭಗವಂತನನ್ನು ಖಂಡಿತ ಪಡೆಯುತ್ತಾನೆ.

ಜೀವನದಲ್ಲಿ ಯಾರೂ ಅಪಾಯಗಳನ್ನು ಇದಿರಿಸದೆ ಇರುವುದಕ್ಕೆ ಸಾಧ್ಯವಿಲ್ಲ; ಕಷ್ಟಗಳು ಬಂದೇ ಬರುತ್ತವೆ. ಆದರೆ ಅವುಗಳೆಲ್ಲ ಹಾಗೆಯೇ ಇರುವುದಿಲ್ಲ. ಸೇತುವೆ ಕೆಳಗೆ ಹರಿಯುವ ನೀರಿನಂತೆ ಆ ಕಷ್ಟಗಳೂ ಕೂಡ ಬಂದು ಮಾಯವಾಗಿ ಬಿಡುತ್ತವೆ.

**ಶ್ರೀಮಾತೆ ಶಾರದಾದೇವಿ**

# ಪ್ರಾರ್ಥನೆ

ಭದ್ರಂ **ನೋ ಅಪಿ ವಾತಯ**
**ಮನೋ ದಕ್ಷಮುತ ಕ್ರತುಮ್ |**
ಅಧಾ **ತೇ ಸಖ್ಯೇ ಅಂಧಸೋ ವಿವೋ ಮದೇ**
**ರಣನ್ಗಾವೋ ನ ಯವಸೇ ವಿವಕ್ಷಸೇ ||**

(ಋಗ್ವೇದ. ೧೦.೨೫.೧)

ಹೇ ದೇವ, ನಮಗೆ ಶುಭವಾದ ಮತ್ತು ಸಂತೋಷದಾಯಕವಾದ ಮನಸ್ಸನ್ನು ದಯಪಾಲಿಸು.

ಕರ್ಮಕೌಶಲವನ್ನೂ ಹಾಗೂ ಜ್ಞಾನವನ್ನೂ ಪ್ರೇರೇಪಿಸು. ನಿನ್ನನ್ನು ಸ್ತುತಿಸಿ ನಿನ್ನ ಸಖ್ಯವನ್ನನುಭವಿಸುತ್ತಿರುವವರು, ಧೇನುಗಳು ಹುಲ್ಲುಗಾವಲಿನಲ್ಲಿ ಹರ್ಷವಾಗಿರುವಂತೆ, ನಿನ್ನ ಆನಂದದಲ್ಲಿ ಪಾಲ್ಗೊಳ್ಳಲಿ. ನೀನು ಎಲ್ಲರಿಗಿಂತಲೂ ಅಧಿಕನು.

ಯಾಂ **ಮೇಧಾಂ ದೇವಗಣಾಃ**
**ಪಿತರಶ್ಚೋಪಾಸತೇ |**
ತಯಾ **ಮಾಮದ್ಯ ಮೇಧಯಾಗ್ನೇ**
**ಮೇಧಾವಿನಂ ಕುರು ಸ್ವಾಹಾ ||**

(ಯಜುರ್ವೇದ ೩೨.೧೪)

ಯಾವ ಮೇಧಾಶಕ್ತಿಯನ್ನು ದೇವತೆಗಳು ಪಿತೃಗಳು ಅನುಭವಿಸುತ್ತಿರುವರೋ, ಇಂದು ಆ ಮೇಧಾಗ್ನಿಯಿಂದ ನನ್ನನ್ನು ಮೇಧಾವಿಯನ್ನಾಗಿ (ಪ್ರಕಾಶಮಾನವಾದ ಬುದ್ಧಿಯುಳ್ಳವನನ್ನಾಗಿ) ಮಾಡು.

ವರ್ಚೋದಾ **ಅಗ್ನೇऽಸಿ ವರ್ಚೋ ಮೇ ದೇಹಿ |**

(ಯಜುರ್ವೇದ ೩.೧೭)

ಬೌದ್ಧಿಕ ವರ್ಚಸ್ಸನ್ನು ದಯಪಾಲಿಸುವ ಹೇ ದೇವ, ನನಗೆ ಬೌದ್ಧಿಕ ವರ್ಚಸ್ಸನ್ನು ಕರುಣಿಸು.

ಇಮಾಂ **ಧಿಯಂ ಶಿಕ್ಷಮಾಣಸ್ಯ ದೇವ**
**ಕ್ರತುಂ ದಕ್ಷಂ ವರುಣ ಸಂಶಿಶಾಧಿ |**

(ಋಗ್ವೇದ ೮.೪೨.೩)

ಓ ಸರ್ವವ್ಯಾಪಕ ದೇವತೆಯೇ! ಜ್ಞಾನೋದಯಕ್ಕಾಗಿ ಕಾತರರಾಗಿರುವವರ ಬುದ್ಧಿಯನ್ನು ಜಾಗ್ರತಗೊಳಿಸಿ ಪ್ರಕಾಶಮಾನವಾಗುವಂತೆ ಮಾಡು.